ಮೇ-2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

ಸ್ವಚ್ಛ ಸಂಕೀರ್ಣ ಜಲೋತ್ಸವ Har Ghar Jal Jal Jeevan Mission

## "PM Samvad"



**ಆಜಾದಿ ಕಾ ಅಮೃತ್ ಮಹೋತ್ಸವ್** ಕಾರ್ಯಕ್ರಮದ ಪ್ರಯುಕ್ತ **ಪ್ರಧಾನಿ ನರೇಂದ್ರ ಮೋದಿಯವರು** ದಿನಾಂಕ:31-05-2022 ರಂದು ಗರೀಬ್ ಕಲ್ಯಾಣ್ ಕಾರ್ಯಕ್ರಮಗಳ ದೇಶದ ಎಲ್ಲಾ ಫಲಾನುಭವಿಗಳನ್ನುದ್ದೇಶಿಸಿ ವೀಡಿಯೋ ಸಂವಾದ ನಡೆಸಿದರು. ಆಯ್ದ ಫಲಾನುಭವಿಗಳೊಂದಿಗೆ ಖುದ್ದು ಪ್ರಧಾನಿಗಳು ಮಾತುಕತೆ ನಡೆಸಿದರು. ರಾಜ್ಯದಿಂದ ಕಲ್ಬುರ್ಗಿ ಜಿಲ್ಲೆಯ ಆಯುಷ್ಮಾನ್ ಭಾರತ್ ಯೋಜನೆಯ ಫಲಾನುಭವಿ ಸಂತೋಷಿ ಗಣಪತಿ ಜೊತೆ ಮಾತನಾಡಿದ್ರು. ಪ್ರಧಾನಿಗಳ ಸಂವಾದಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯದ ಎಲ್ಲಾ ಫಲಾನುಭವಿಗಳನ್ನುದ್ದೇಶಿಸಿ ಮಾತನಾಡಿದರು. ಅಲ್ಲದೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಂದಲೂ ಜಿಲ್ಲಾ ಉಸ್ತುವಾರಿ ಸಚಿವರುಗಳು ಹಾಗೂ ಶಾಸಕರುಗಳು ಸೇರಿದಂತೆ ಎಲ್ಲಾ ಅಧಿಕಾರಿಗಳು ಫಲಾನುಭವಿಗಳೊಂದಿಗೆ ವೀಡಿಯೋ ಸಂವಾದದಲ್ಲಿ ಭಾಗಿಯಾಗಿದ್ರು.





## "ಮುಟ್ಟಿನ ಒಗ್ಗಟ್ಟು" "it's my day"



ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು **ಸ್ವಚ್ಛ ಭಾರತ್ ಮಿಷನ್(ಗ್ರಾ)** ಹಾಗೂ **ಜಲ ಜೀವನ್ ಮಿಷನ್** ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದ್ದು, ಗ್ರಾಮೀಣ ಕರ್ನಾಟಕಕ್ಕೆ ನೀರು ಮತ್ತು ನೈರ್ಮಲ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ಘಟಕಾಂಶಗಳಲ್ಲಿ ಒಂದಾಗಿರುವ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಗ್ರಾಮೀಣ ಕರ್ನಾಟಕದಲ್ಲಿ ಉತ್ಪತ್ತಿಯಾಗುವ ಋತುಚಕ್ರ ಉತ್ಪನ್ನಗಳ ವಿಲೇವಾರಿಗೆ ಸಂಬಂಧಿಸಿದಂತೆ ಹಾಗೂ ಆರೋಗ್ಯಕರ ಋತುಚಕ್ರ ಅಭ್ಯಾಸಗಳ ಬಗ್ಗೆ ಗ್ರಾಮೀಣ ಕರ್ನಾಟಕದ ಜನರಿಗೆ ಜಾಗೃತಿ ಮೂಡಿಸುವ ಅಗತ್ಯವಿರುವ ಹಿನ್ನೆಲೆಯಲ್ಲಿ, ಮಹಿಳೆಯರನ್ನು ಮಾನಸಿಕವಾಗಿ ಸದೃಢರನ್ನಾಗಿಸುವ ನಿಟ್ಟಿನಲ್ಲಿ **"ಮುಟ್ಟಿನ ಒಗ್ಗಟ್ಟು"** ಎಂಬ ಶೀರ್ಷಿಕೆಯಡಿ **"it's my day"** ಎಂಬ ಮೂರು ತಿಂಗಳ ಬೃಹತ್ ಆಂದೋಲನವನ್ನು ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿದೆ. 28ನೇ ಮೇ 2022 ರಿಂದ ಆರಂಭವಾಗಿರುವ ಈ ಆಂದೋಲನ 28ನೇ ಆಗಸ್ಟ್-2022 ವರೆಗೂ ಜಾಲ್ತಿಯಲ್ಲಿರಲಿದ್ದು, ರಾಜ್ಯಾದ್ಯಂತ ಆರೋಗ್ಯಕರ ಋತುಚಕ್ರದ ಬಗ್ಗೆ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.








## ತರಬೇತಿ ಕಾರ್ಯಕ್ರಮಗಳು

### "ISRA ಪ್ರತಿನಿಧಿಗಳಿಗೆ ತರಬೇತಿ"



**ಜಲ ಜೀವನ್ ಮಿಷನ್** ಯೋಜನೆಯ ಅನುಷ್ಠಾನ ಸಂಬಂಧ ಗ್ರಾಮೀಣ ಕರ್ನಾಟಕದ ಜನರಲ್ಲಿ ಜಾಗೃತಿ ಮೂಡಿಸಲು ತಾಲ್ಲೂಕು ಮಟ್ಟದಲ್ಲಿ ನೂತನವಾಗಿ ನೇಮಕವಾಗಿರುವ ಅನುಷ್ಠಾನ ನೆರವು ಸಂಸ್ಥೆಗಳ ಸಿಬ್ಬಂದಿಗೆ ಮೇ ತಿಂಗಳ 5, 6, 7ರಂದು ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಚಾಮರಾಜನಗರದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಾಗಾರವನ್ನು ಚಾಮರಾಜನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಉದ್ಘಾಟಿಸಿದರು. ಬಳಿಕ ಶಿಬಿರಾರ್ಥಿಗಳಿಗೆ ರಾಜ್ಯ ಕಚೇರಿಯ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದರು.







### "ರಾಷ್ಟ್ರಮಟ್ಟದ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರ"




ದೇಶಾದ್ಯಂತ **ಜಲ ಜೀವನ್ ಮಿಷನ್** ಯೋಜನೆಯ ಅನುಷ್ಠಾನ ಪ್ರಗತಿಯಲ್ಲಿದ್ದು, ಯೋಜನೆಯ ಅನುಷ್ಠಾನ ಮತ್ತು ನಿರ್ವಹಣೆ ಸಂಬಂಧ ಸ್ಥಳೀಯ ಭಾಗೀದಾರರುಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ **ಜಲ ಶಕ್ತಿ ಮಂತ್ರಾಲಯ** ಭಾರತ ಸರ್ಕಾರವು ದೇಶಾದ್ಯಂತ ಪ್ರಮುಖ ಸಂಪನ್ಮೂಲ ಸಂಸ್ಥೆ (Key Resource Center) ಗಳನ್ನು ಆಯ್ಕೆ ಮಾಡಿದ್ದು, ಇವುಗಳ ಸದಸ್ಯರಿಗೆ ಮತ್ತು ಎಲ್ಲಾ ರಾಜ್ಯಗಳ ನೋಡಲ್ ಅಧಿಕಾರಿಗಳಿಗೆ ರಾಷ್ಟ್ರಮಟ್ಟದ 2 ದಿನಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಾಗಾರವನ್ನು ನವದೆಹಲಿಯಲ್ಲಿ ಏರ್ಪಡಿಸಲಾಗಿತ್ತು. ಮೇ ತಿಂಗಳ 11, 12ನೇ ರಂದು ನಡೆದ ಕಾರ್ಯಾಗಾರದಲ್ಲಿ ರಾಜ್ಯದಿಂದ ಉಪ ಕಾರ್ಯದರ್ಶಿ (ಅಭಿವೃದ್ಧಿ) ಸೇರಿದಂತೆ ಇತರರು ರಾಜ್ಯವನ್ನು ಪ್ರತಿನಿಧಿಸಿದ್ದು, ರಾಜ್ಯಕ್ಕೆ ಆಯ್ಕೆಯಾಗಿರುವ ಪ್ರಮುಖ ಸಂಪನ್ಮೂಲ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಿದರು.





### "ಬೂದು ನೀರು ನಿರ್ವಹಣೆ ಕುರಿತ ರಾಷ್ಟ್ರಮಟ್ಟದ ಕಾರ್ಯಾಗಾರ"




United Nations Office for Project Services, Department of Drinking Water and Sanitation, Ministry of Jal Shakti, Government of India ಇವುಗಳ ಸಹಯೋಗದೊಂದಿಗೆ ಮೇ, 26, 27ನೇ ರಂದು ರಾಷ್ಟ್ರಮಟ್ಟದಲ್ಲಿ **ಬೂದು ನೀರು ನಿರ್ವಹಣೆ** ಸಂಬಂಧ ಕ್ಷಿಪ್ರ ಕ್ರಿಯೆಯೊಂದಿಗೆ ಕಲಿಕಾ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ನವದೆಹಲಿಯಲ್ಲಿ ನಡೆದ ಈ ಕಾರ್ಯಾಗಾರದಲ್ಲಿ ರಾಜ್ಯವನ್ನು ಪ್ರತಿನಿಧಿಗಳಾಗಿ ಹಾವೇರಿ, ವಿಜಯಪುರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗಿಯಾಗಿ, **ಬೂದು ನೀರು ನಿರ್ವಹಣೆ** ಸಂಬಂಧ ರಾಜ್ಯದಲ್ಲಾಗಿರುವ ಉತ್ತಮ ಕಾರ್ಯಗಳ ಬಗ್ಗೆ ಸಭೆಗೆ ಮಾಹಿತಿ ನೀಡುವ ಜೊತೆಗೆ ಬೇರೆ ರಾಜ್ಯಗಳಲ್ಲಾಗಿರುವ ಉತ್ತಮ ಕಾರ್ಯಗಳ ಕುರಿತು ಚರ್ಚಿಸಿದರು.